ಅನಂತರ ಮತ್ತೊಂದು ಅರ್ಜಿ ಬಂದಿತ್ತು. ತಾನು ಹಾಲಿ ಗರ್ಭಿಣಿಯಾಗಿರುವುದಾಗಿಯೂ ಆರ್ಥಿಕವಾಗಿ ಅತ್ಯಂತ ದುರವಸ್ಥೆಯಲ್ಲಿ ಇರುವುದಾಗಿಯೂ ತನ್ನ ತಂದೆ ನೀಡಿರುವ ವರದಕ್ಷಿಣೆ ಹಣವನ್ನು ಮತ್ತು ಮೋಟಾರ್ ಬೈಕ್‌ನ್ನು ಹಿಂದಿರುಗಿಸಿ ತನಗೆ ಮದುವೆಯಿಂದ ಬಿಡುಗಡೆ ಕೊಡಿಸುವಂತೆಯೂ ಆಕೆ ಮತ್ತೆ ಕೇಳಿದ್ದಳು. ಖಲಂದರ್ ಈ ವಿಷಯದಲ್ಲಿ ಸಿಕ್ಕಿ ಬೀಳಲು ಇಷ್ಟಪಡುತ್ತಿರಲಿಲ್ಲ. ಆದರೆ, ನಾಸಿರ್‌ನ ಮಗಳಿಗಾಗಿ ತಾನು ಹೋರಾಟ ಮಾಡಬೇಕು ಎಂದು ಅವನು ನಿರ್ಧರಿಸಿದ್ದ. ಹೀಗಾಗಿ, ಜಮಾತ್‌ನ ಸಭೆಯಲ್ಲಿ ಕೂಡ ವಿರುದ್ಧ್ವನಿಯಲ್ಲಿ ಮಾತನಾಡಿದ್ದ. ಮತ್ತು ಘನಿ ಹಾಗೂ ಅವನ ಮಗನಾದ ಇನಾಯತ್‌ನನ್ನು ಜಮಾತ್‌ನ ಪಂಚಾಯತಿಗೆ ಕರೆಸಬೇಕೆಂತಲೂ ಅವನು ಒತ್ತಾಯ ಮಾಡಿದ್ದ. ಅರ್ಜಿಯಲ್ಲಿ ಅವಳ ಹೆಸರನ್ನು ನೂರ್ ಫಾತಿಮಾ ಎಂದು ಬರೆಯಲಾಗಿತ್ತು.

ನೂರ್ ಫಾತಿಮಾ ಎಂಬ ಹೆಸರನ್ನು ಅವನು ಮನದಟ್ಟು ಮಾಡಿಕೊಂಡ. ಅವನು ಒಂದೆರಡು ಸಾರಿ ಘನಿಯನ್ನು ಖಾಸಗಿಯಾಗಿ ಕಂಡು ನೂರ್ ಫಾತಿಮಾ ಪರವಾಗಿ ಬಲವಾಗಿ ಪ್ರತಿಪಾದಿಸಿದ್ದ. ಮಗನಷ್ಟೇ ಭಂಡನಾಗಿದ್ದ ಘನಿ ಅಸಹ್ಯಕರ ಮಾತುಗಳನ್ನು ಮತ್ತು ಆರೋಪಗಳನ್ನು ನೂರ್ ಫಾತಿಮಾಳ ವಿರುದ್ಧ ಹೊರಿಸಿದ್ದರಿಂದ ಕೋಪಗೊಂಡು ಅವನು ಘನಿಗೆ ಒಂದೆರಡು ಏಟನ್ನು ಕೊಟ್ಟು ಅವನ ಶರ್ಟನ್ನು ಕೂಡ ಹರಿದಿದ್ದ. ಅವನೇನೂ ಸಾಮಾನ್ಯದವನಲ್ಲ. ಇಂತಹದೇ ಸಂದರ್ಭವನ್ನು ನಿರೀಕ್ಷಿಸುತ್ತಿದ್ದಂತೆ ಘನಿ ಪೊಲೀಸರಿಗೆ ಕಂಪ್ಲೇಂಟನ್ನು ಕೊಟ್ಟ.

ಪೊಲೀಸ್ ಕಂಪ್ಲೇಂಟ್ ಕೊಟ್ಟಮೇಲೆ ಬಾಕಿ ಏನು ಉಳಿಯಿತು? ನೂರ್ ಫಾತಿಮಾಳ ವಿಷಯ

